'ಗೊತ್ತಾಗದೆ...' ರಾಗ ಎಳೆದೆ. ಕಪಾಳಕ್ಕೆ ಹೊಡೆಯಲು ಬಂದ, ನೆಲ್ಲಿ ಮರದ ಹತ್ತಿರ ಓಡಿಹೋದೆ, ಊಟಕ್ಕೂ ಬರಲಿಲ್ಲ. ಸಂಜೆಯವರೆಗೂ ಅಪ್ಪ ಕರೆಯುತ್ತಿದ್ದ. ರಾತ್ರಿ ಊಟಕ್ಕೆ ಕುಳಿತಿದ್ದೆ, ರಟ್ಟೆ ಹಿಡಿದೆತ್ತಿ 'ಹೋಗು,.. ಸಲಗೆ ಕೊಟ್ಟರೆ ಸದರು ಮಾಡ್ತಿ ಅಪ್ಪಯ್ಯನ್ನ.. ಇದ್ದಿದ್ದು ಹೇಳಿದರೆ ನೆಲ್ಲಿ ಮರ ಹತ್ತಿ ಹೆದರಿಸದು.. ಅಲ್ದೇನು...?' ಕಣ್ಣುಬಿಟ್ಟ. ಅಳುತ್ತಲೇ ನಾಕುತುತ್ತು ತಿಂದು ಮಲಗಿದ್ದೆ. ಹೋಯ್...ಹೋಯ್ ಕೆಳಗಿನ ಮನೆಯಲ್ಲಿ ಕಾಗೆಯನ್ನು ಕೂಗುತ್ತಿದ್ದರು. ಹೊರಗೆ ಬಂದು ಗಡಿಯಾರ ನೋಡಿದೆ, ಎರಡೂವರೆ ಆಗಿತ್ತು. ನಾನೇ ಬಡಿಸಿಕೊಂಡು ಊಟ ಮಾಡಿದೆ. ಬಾಳೆಯ ಸುತ್ತ ನೀರು ಚಿಮುಕಿಸಿ, ನೀರಲ್ಲಿ ಒಂದು ಗೆರೆ ಎಳದೆ, ಬಾಳೆಯ ಪಾರ್ಶ್ವಕ್ಕೆ ನಾಲ್ಕು ಅಗುಳು ಇಟ್ಟೆ, ಆರು ಅಗುಳು ತಿಂದೆ. ಮಂತ್ರ ಮರೆತು ಹೋಗಿತ್ತು.

ಅನ್ನಕ್ಕೆ ಕೆಸುವಿನ ಬೀಳಿನ ಸಾಸಿವೆ ಕಲಸಿಕೊಂಡೆ, ಬಾಳೆಯ ತುದಿಗೆ ಬದನೆಕಾಯಿ ಚಟ್ನಿ ಇತ್ತು. ಊಟಕ್ಕೆ ಕುಳಿತಾಗಲೆಲ್ಲ ಉಪನಯನದ ನೆನಪೇ ಕಾಡುವುದು. ಮತ್ತೇನು ಅಲ್ಲ ಬೋಳು ಕೆತ್ತಿ ಜುಟ್ಟು ಬಿಟ್ಟಿದ್ದು ಮತ್ತು ಉಡುಗೊರೆ ಕೊಡುವ ಹೊತ್ತಿಗೆ ಎಲ್ಲ ಬೋಳಿನ ಮೇಲೆ ಅಕತೆ ಒಗೆದದ್ದು. ಅವತ್ತು ಮಂತ್ರ ಬರುತ್ತಿತ್ತು. ಉಂಡು ಮುಗಿಸಿ ಕುನ್ನಿಗೆ ಅನ್ನ ಹಾಕಿ ಅಡಿಕೆ ಅಟ್ಟದ ಮೇಲೆ ಹೋಗಿ ಕುಳಿತೆ, ವಿಪರೀತ ಬಿಸಿಲು ಆದರೂ ಎದ್ದು ಹೋಗಲು ಮನಸ್ಸಾಗಲಿಲ್ಲ. ಅರ್ಧಗಂಟೆಯ ನಂತರ ಎದ್ದು ಏಣಿಯ ಮೆಟ್ಟಿಲಿಳಿದು ಬಂದೆ. ಅಂಗಳ, ಹೇಡಿಗೆ ಎಲ್ಲ ಕಪ್ಪು ಕಪ್ಪಾಗಿ ಕಾಣಿಸಿತು. ನೋಡಿದ್ದೆಲ್ಲ ಅಚ್ಚುಕೆಂಪು ಕಪ್ಪು ನೀಲಿ ಬಣ್ಣದ ವಿಚಿತ್ರ ಆಕೃತಿ ಕಾಣಿಸುತ್ತಿತ್ತು. ಮತ್ತೆ ಕೋಣೆಯ ಒಳಗೆ ಹೋಗಿ ಮಲಗಿದೆ.

ನನಗೆ ಎಚ್ಚರವಿತ್ತು ಮುದುಕಿ ಬಂದವಳು ದೇವರ ಪೀಠಕ್ಕೆ ಬ್ಯಾಟರಿ ಬಿಟ್ಟು ನೋಡಿದಳು. ಇವತ್ತಿನದೇ ಹೂಗಳಿದ್ದವು, ಕುನ್ನಿಯ ಬಟ್ಟಲು ನೋಡಿದಳು ಅನ್ನ ಮಜ್ಜಿಗೆ ಇತ್ತು. ಒಳಬಂದು ಪದಾರ್ಥದ ಬೋಗುಣಿ ನೋಡಿದಳು ಊಟ ಮಾಡಿದ್ದೂ ಖಾತ್ರಿ ಮಾಡಿಕೊಂಡಳು. ಚಹಾ ಮಾಡಿ ಎಬ್ಬಿಸಿದಳು. 'ಎಲ್ಲೋದೆ ನೀನು ಹೇಳಿ ಎಲ್ಲವೂ ಕೇಳಿದ ಬಂದು ಹೋದ್ರೆ ಏನು ತೊಂದ್ರೆ ಇತ್ತು.' 'ರಾತ್ರಿ ಊಟಕ್ಕೆ ಹೋಗ್ತೆ..' 'ಚಹಾ ಕುಡಿದು ಮತ್ತೆ ಮಲಗದು ಬೇಡ, ಮೊಗೆ ಬಳ್ಳಿಗೆ ನೀರು ಹಾಕಿ ಬರ ಕೆಲಸ ಇದ್ದು.' 'ಹ್ಲೂ..' ಮನೆಗೆ ಬೀಗ ಹಾಕುವ ಅಭ್ಯಾಸ ಇಲ್ಲ, ಎರಡು ಉದ್ದನೆಯ ಕೊಡ ಹಿಡಿದು ದೊಡ್ಡ ಮಾವಿನಮರ ಹುಲಿಯಪ್ಪನ ಕಲ್ಲು ದಾಟಿ ಗದ್ದೆಗೆ ಬಂದೆವು. ದೊಡ್ಡಪ್ಪ ದಾರಿಯಲ್ಲಿ ಸಿಕ್ಕಿದ. 'ಶ್ರಾದ್ಧಕ್ಕೆ ಬಂದೆ ಇಲ್ಯಲೋ ಮಾರಾಯ' 'ರಾತ್ರಿ ಬತ್ತೆ.' 'ರಾತ್ರಿ ಬಂದೆಂತಾ ಪ್ರಯೋಜನ. ನೀನೇನು ಇಸ್ಪೀಟ ಆಡವಲ್ಲ.' 'ನೋಡ್ತಾ ಕುತ್ಗತ್ತೆ.' 'ಸರಿ ರಾತ್ರಿ ಬಾ.. ತಪ್ಪಿಸಡ' ಗದ್ದೆ ತೆಗೆದು ಅಡಿಕೆ ತೋಟ ಮಾಡಿದ್ದರಿಂದ ಮುಂಚಿನಷ್ಟು ದೊಡ್ಡ ತೋಟ ಇಲ್ಲ, ಆದರೂ ಮನೆಗೆ ಎರಡು ಎಕರೆಯಂತೆ ದೊಡ್ಡ ಬಯಲೇ ಸರಿ. ಬೀಸುವ ಗಾಳಿಗೆ ಮುದುಕಿಯ ಸೀರೆ ಹಿಮ್ಮುಖವಾಗಿ ಹಾರುತ್ತಿತ್ತು. ನಾನು ಲುಂಗಿ ಎತ್ತಿಕಟ್ಟಿದ್ದೆ. ತುಪ್ಪಿ ಕವಳ ಎರಡು ಮಾರು ಹಿಂದೆ ವಿನ್ಯಾಸವಾಗಿ ಹಾರಿಬಿದ್ದಿತು. ಚಿಟ್ಟೆಬದ ಹಕ್ಕಿ ನಮ್ಮ ಬರುವಿಕೆಯನ್ನು ತಿಳಿಸಲು ಚೀರಾಡುತ್ತ ಹಾರಿಹೋಯಿತು. ನೀರಿನ ಹೊಂಡದಲ್ಲಿ ಕೊಡ ಮುಳುಗಿಸಿದಾಗ ಏಳುವ ಗುಳ್ಳೆಯ ಸದ್ದಿಗೆ ಸಮ್ಮೋಹಿನಿ ಶಕ್ತಿ ಇದೆಯೇ ಎಂದು ಯೋಚಿಸಿದೆ. ತುಂಬಿದ ಕೊಡವನ್ನು ಅರ್ಧ ದಾರಿಗೆ ಸಾಗಿಸಿ ಮುದುಕಿಗೆ ಕೊಟ್ಟೆ ಅವಳು ಖಾಲಿ ಕೊಡವನ್ನು ಹಸ್ತಾಂತರಿಸಿದಳು. 'ನಿನಗೆ ನೆನಪಿದ್ದನ ಮಾಣಿ'

'ಎಂತದು'

'ಇಲ್ಲಿ ಗಳಿಯ ಕಟ್ಟಿದ ಕೋಣ ಆಚೆಗಿನ ಹೊಳೆಯಲ್ಲಿ ಮೀಯಲು ಇಳಿದಾಗ ನೀನು ಅತ್ತಿದ್ದು' 'ಇಲ್ಲ.. ಎಂತಕ್ಕಾಗಿ ಅತ್ತಿದ್ದೆ..?' 'ಕೋಣ ತೇಲಿ ಹೋಗ್ತದೆ ಯಾರದ್ರು ತಗಬನ್ನಿ ಹೇಳಿ' ನಾನು ಮುದುಕಿ ಇಬ್ಬರೂ ನಕ್ಕೆವು. ಎಂಟು ಓಳಿಗೆ ಎರಡರಂತೆ ಹದಿನಾರು ಕೊಡ ನೀರು ಹೊತ್ತು ಗದ್ದೆಯ ಕಂಠದ ಮೇಲೆ ಕುಳಿತಿದ್ದಾಗ ತೆಳು ಗುಲಾಬಿ ಬಣ್ಣದ ಹೂವೊಂದು ಕಂಡು ಕಿತ್ತು ನೋಡಿದೆ. ಹೂವಿನೊಂದಿಗೆ ಅದರ ಕುಬ್ಜ ಕಾಂಡವು ಕೈಗೆ ಬಂತು. ಹೂವನ್ನು ಕಿತ್ತು ಮೂಸಿದೆ ವಿಚಿತ್ರ ವಾಸನೆ ಎನಿಸಿ ಎಸೆದೆ. 'ಬುದ್ಧಿವಂತನಿಗೆ ಮೂರು ಬದಿ' ಮುದುಕಿ ನಕ್ಕಳು. 'ನೀನು ಮನೆಗೆ ಹೋಗು ನಾನು ಆಮೇಲೆ ಬರ್ತೆ' ಎಂದೆ. ಇಷ್ಟೊತ್ತು ಗಮನಕ್ಕಿಲ್ಲದ ಹಿಟಾಚಿಯ ಸದ್ದು ಕೇಳಿಸಿ ಮಗ್ಗುಲಿಗೆ ಹೊರಳಿದೆ ಎರಡು ಹಿಟಾಚಿ ದರೆಯ ಮೇಲೊಂದು ಕೆಳಗೊಂದು ಆಡುತ್ತಿದ್ದವು, ಎರಡು ಕುಬ್ಜ ಅವಳಿಜವಳಿ ಹುಡುಗಿಯರಂತೆ. ಇಬ್ಬರಿಗೂ ಡುಮ್ಮ ಹೊಟ್ಟೆ, ಚಿಕ್ಕ ಕಾಲು, ಉದ್ದದ ಕೈ, ಅದೂ ಒಂದೇ ಕೈ ಆಡುತ್ತಿದ್ದವು. ಮಣ್ಣಿನಾಟ ಅವರ ಓಡಾಟಕ್ಕೆ ಹೆದರಿ ಮರಗಳು ಬೀಳುತ್ತಿದ್ದವು. ಅವರು ಕುಣಿಯುತ್ತಿದರು, ಮಣ್ಣನ್ನು ಎತ್ತಿ ಎಸೆಯುತ್ತಿದರು. ಮನೆಯಲ್ಲಿ ಬೈಯಲು ಅಮ್ಮ ಇಲ್ಲದಿರಬಹುದು ನನ್ನಂತೆ ಎಂದು ಊಹಿಸಿದೆ. ಹತ್ತಿರ ಹೋದಂತೆ ಕುಬ್ಜ ಹುಡುಗಿಯರು ವಿಕಾರವಾದವು, ರಾಕಸನಂತಾದವು,ಸಿಟ್ಟಿನಲ್ಲಿ ಗುದ್ದಿಕೊಳ್ಳುತ್ತಿದ್ದವು ಒಂದರ ಕೈ ಒಂದು ಹಿಡಿದು ಜಗ್ಗಿಕೊಂಡವು. 'ಏನು ವಿಶೇಷ' ಎಂದೆ. 'ಗ್ರಾಮ ಪಂಚಾಯಿತಿ ಅಗಳ ತೋಡುವ ಸ್ಕೀಮು' ಎಂದ ಅಲ್ಲೇ ನಿಂತಿದ್ದವ. ತಿರುಗಿ ಬಂದೆ ಮತ್ತೆ ಕುಬ್ಜ ಹುಡುಗಿಯರು ಸದ್ದು ಕಡಿಮೆ ಮಾಡಿ ಆಡಗೊಡಗಿದವು. ನೆರೆಮನೆಯ ಮೊಗೆ ಬಳ್ಳಿಗೆ ಗಂಗೆ ನೀರು ಹಾಕುತ್ತಿದ್ದಳು ಮೆಲ್ಲಗೆ ಹತ್ತಿರ ಹೋಗಿ ಅರ್ಧ ದಾರಿಗೆ ನಾನು ತಂದುಕೊಡಲೇನೆ ಎಂದೆ. 'ಒಬ್ಬಳೇ ಇದ್ದಾಗ ಹಿಂಗೆ ಬರಬೇಡಿ' ಮುಖಕ್ಕೆ ಹೊಡೆದಂತೆ ಹೇಳಿದಳು. ಎತ್ತಿಕಟ್ಟಿದ್ದ ಲುಂಗಿ ಸದ್ದು ಮಾಡುತ್ತ ಮನೆಗೆ ಬಂದುಬಿಟ್ಟೆ. ಬರುವಷ್ಟರಲ್ಲಿ ಊಟಕ್ಕರ ಆಮಂತ್ರಣ ಬಂದಿತ್ತು. ಗೋಪಿ ಊಟಕ್ಕೆ ಬಂದಿರಲಿಲ್ಲ ಬೆಕ್ಕನ್ನು ಓಡಿಸುತ್ತಲೇ ಇದ್ದ. 'ಸಾಕು ಬಿಡೋ ಮಾರಾಯ ಆ ಬೆಕ್ಕನ್ನು, ಗೋಪಿ ಕನಸು ಬಿದ್ರೂ ಆ ಬೆಕ್ಕು ಉಚ್ಚೆ ಹೊಯ್ಯುವ ಹಂಗೆ ಆತು' ಎಂದಳು ಕೃಷ್ಣಜ್ಜನ ಹೆಂಡತಿ ಲಲಿತಮ್ಮ. ಗೋಪಿ ಬಂದು ನನ್ನ ಪಕ್ಕದಲ್ಲೇ ಕುಳಿತ.

